ಓ.ಎಸ್ ನಂ. 22/2017

ಪಿ. .ಡಬ್ಲ್ಯೂಃ 1

(ಇಂದು ದಿನಾಂಕಃ13-11-2019 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.)

**ಮುಂದುವರಿದ ಪಾಟೀ ಸವಾಲುಃ** ಪ್ರತಿವಾದಿ ಪರ ಶ್ರೀ.ಎಮ್.ಎಲ್.ಎನ್. ವಕೀಲರಿಂದಃ

ನಿ.ಪಿ.10 ಪಹಣಿ ಪತ್ರಿಕೆಗೆ ಪೂರಕವಾಗಿ ಯಾವುದೇ ಕ್ರಯ ಪತ್ರ ಅಥವಾ ಸರ್ವೆ ನಕಾಶೆಯನ್ನು ಹಾಜರುಪಡಿಸಿರುವುದಿಲ್ಲ. ನಿ.ಪಿ.10 ಪಹಣಿ ಪತ್ರಿಕೆಗೆ ಪೂರಕವಾಗಿ ಕ್ರಯ ಪತ್ರ ಹಾಗು ಸರ್ವೆ ನಕಾಶೆಯನ್ನು ಹಾಜರುಪಡಿಸಲು ತೊಂದರೆ ಇದೆಯಾ ಎನ್ನುವ ಪ್ರಶ್ನೆಗೆ ಸಾಕ್ಷಿ ಹುಡುಕಬೇಕಾಗುತ್ತದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯಲ್ಲಿ ರಸ್ತೆ ಹಾದು ಹೋದ ಬಗ್ಗೆ ಗುರುತು ಇರುವಂತಹ ನಕಾಶೆಯನ್ನು ಹಾಜರುಪಡಿಸಿರುವುದಿಲ್ಲ . ನಿ.ಪಿ.10 ಪಹಣಿ ಪತ್ರಿಕೆ ಗೆ ಸಂಬಂಧಿಸಿದ ಚೆಕ್ ಬಂದಿಯನ್ನು ಹಾಜರುಪಡಿಸಿರುವುದಿಲ್ಲ. ಈ ಕೇಸಿನಲ್ಲಿರುವ ದಾವಾ ಸ್ವತ್ತಿಗೂ ಹಾಗು ನಿ.ಪಿ.10 ಪಹಣಿ ಪತ್ರಿಕೆಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ . ನಿ.ಪಿ.11 ಲೀಸ್ ಡೀಡ್ ಗೆ ಸಂಬಂಧಿಸಿದ ಬಾಂಡ್ ಪೇಪರ್ ನ್ನು ಅಬ್ದುಲ್ ಸತ್ತರ್ ಶೇಖ್ ರವರು ತಂದಿರುತ್ತಾರೆ. ನಿ.ಪಿ.11 ಲೀಸ್ ಡೀಡ್ ನ್ನು ನನ್ನ ಮಾವ ಬರೆದುಕೊಟ್ಟಿರುತ್ತಾರೆ. ಸದ್ರಿ ಬಾಂಡ್ ಪೇಪರ್ ನಲ್ಲಿ 1 ನೇ ಪಾರ್ಟಿ ಹಾಗು 2 ನೇ ಪಾರ್ಟಿ ಯಾರು ಎಂದು ನನಗೆ ನೆನಪಿಲ್ಲ. ಯಾವುದೇ ಒಂದು ವ್ಯವಹಾರಕ್ಕೆ ಸಂಬಂಧಿಸಿದಂತೆ ಉಭಯ ಪಕ್ಷಗಾರರು ಕುಳಿತು ಒಮ್ಮತ ಅಭಿಪ್ರಾಯಕ್ಕೆ ಬರಬೇಕಾಗುತ್ತದೆ ಎಂದರೆ ಸರಿ . ನಿ.ಪಿ.11 ಲೀಸ್ ಡೀಡ್ ಗೆ ಸಂಬಂಧಿಸಿದಂತೆ ಅಬ್ದುಲ್ ಸತ್ತರ್ ಶೇಖ್ ರವರು ಬಾಂಡ್ ಪೇಪರ್ ನ್ನು ತಂದಿರುವುದಿಲ್ಲ ಆದರೂ ಸಹ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.11 ಲೀಸ್ ಡೀಡ್ ನ್ನು ಆರ್ .ಕೆ. ಜೆರಾಕ್ಸ ನಲ್ಲಿ ತಯಾರಿಸಲಾಗಿರುತ್ತದೆ . ಆರ್ .ಕೆ.ಜೆರಾಕ್ಸ ರಂಗಿನಕಟ್ಟೆಯಲ್ಲಿರುತ್ತದೆ. ನಿ.ಪಿ.11 ಲೀಸ್ ಡೀಡ್ ನ್ನು ನನ್ನ ಮಾವ ತಯಾರಿಸಿಕೊಂಡು ಬಂದಿರುತ್ತಾರೆ . ಆ ಸಮಯದಲ್ಲಿ ನನ್ನ ಮಾವ ಒಬ್ಬರೇ ಇದ್ದರು. ನಿ.ಪಿ.11 ಲೀಸ್ ಡೀಡ್ ನ ಮೊದಲ , ಎರಡನೇ ಹಾಗು 3 ನೇ ಪುಟದಲ್ಲಿ ಅಬ್ದುಲ್ ಸತ್ತರ್ ಹಾಗು ಬೇರೆ ಯಾರ ಸಹಿಯು ಸಹ ಇರುವುದಿಲ್ಲ. ನಿ.ಪಿ.11 ಲೀಸ್ ಡೀಡ್ ನ 4 ನೇ ಪುಟದಲ್ಲಿ ಸದ್ರಿ ಲೀಸ್ ಡೀಡನ್ನು ಯಾವ ಸ್ವತ್ತಿಗೆ ಸಂಬಂಧಿಸಿದಂತೆ ಮಾಡಲಾಗಿದೆ ಎನ್ನುವ ಬಗ್ಗೆ ಶೆಡ್ಯೂಲ್ ನ್ನು ನಮೂದಿಸಿರುವುದಿಲ್ಲ ಎಂದರೆ ಸಾಕ್ಷಿ ಸಾಮಾನ್ಯವಾಗಿ ಯಾರು ಬರೆಯುವುದಿಲ್ಲ ಎಂದು ನುಡಿಯುತ್ತಾರೆ. ಸದ್ರಿ ಲೀಸ್ ಡೀಡ್ ನಲ್ಲಿ ಅಬ್ದುಲ್ ಸತ್ತರ ರವರ ಸಹಿಯನ್ನು ಪೋರ್ಜರಿ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. ಅಬ್ದುಲ್ ಸತ್ತರ್ ಶೇಖ್ ರವರ ಸಹಿಯನ್ನು ಬಿಳಿ ಹಾಳೆಯ ಮೇಲೆ ಪಡೆದುಕೊಂಡು ನಿ .ಪಿ.11 ಲೀಸ್ ಡೀಡ್ ನ್ನು ತಯಾರಿಸಿರುತ್ತೇವೆ ಎಂದರೆ ಸರಿಯಲ್ಲ . ನಿ.ಪಿ.11 ಲೀಸ್ ಡೀಡ್ ಗೂ ಹಾಗು ಅಬ್ದುಲ್ ಸತ್ತರ್ ಶೇಖ್ ರವರಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ.11 ಲೀಸ್ ಡೀಡ್ ಗೆ ಸಂಬಂಧಿಸಿದಂತೆ ಅಬ್ದುಲ್ ಸತ್ತರ್ ಶೇಖ್‌ರವರು ಬಾಡಿಗೆಯನ್ನು ಪಾವತಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ.11 ಲೀಸ್ ಡೀಡ್ ನಲ್ಲಿ ಬಾಡಿಗೆ ದಾರ ಹಾಗು ಮಾಲೀಕ ಎನ್ನುವ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ.11 ಲೀಸ್ ಡೀಡ್ ನ ಮೊದಲ ಸಾಕ್ಷಿದಾರರು ಜುಬೇರ ಲೌನಾ ಆಗಿರುತ್ತಾರೆ. ಜುಬೇರ ಲೌನಾರವರು ನನ್ನ ಮಾವನಿಗೆ ಬ್ರದರ್ ಇನ್ ಲಾ ಆಗಬೇಕು . 2 ನೇ ಸಾಕ್ಷಿದಾರರು ನಮ್ಮ ಇನ್ನೊಂದು ಅಂಗಡಿಯ ಬಾಡಿಗೆದಾರರಾಗಿರುತ್ತಾರೆ. ನಿ.ಪಿ.11 ಲೀಸ್ ಡೀಡ್ ನ್ನು ನಾವು ಹಾಗು ಜುಬೇರ ಲೌನಾ ರವರು ಸೇರಿ ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ . ನಿ.ಪಿ.11 ಲೀಸ್ ಡೀಡ್ ನಲ್ಲಿ ಅಬ್ದುಲ್ ಸತ್ತರ್ ಶೇಖ್ ರವರಿಂದ 25,000/-ರೂ.ಸೆಕ್ಯುರಿಟಿ ಡಿಪಾಸಿಟ್ ನ್ನು ಸ್ವೀಕರಿಸಿದ ಬಗ್ಗೆ ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಆ ಬಗ್ಗೆ ನಿ.ಪಿ.11 ಲೀಸ್ ಡೀಡ್ ನಲ್ಲಿ ಸುಳ್ಳಾಗಿ ನಮೂದಿಸಿರುತ್ತೇವೆ ಎಂದರೆ ಸರಿಯಲ್ಲ.

ಮುಂದುವರಿದ ಪಾಟಿ ಸವಾಲಿಗೆ ಮುಂದುಡಲಾಯಿತು.

(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾ.ದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ

ಹೆ.ನ್ಯಾದಂ., ಭಟ್ಕಳ